# ಉಡುಪು, ಒಡವೆಗಳಲ್ಲೂ ತ್ರಿವರ್ಣ!

ರಾಷ್ಟ್ರೀಯ ಹಬ್ಬಕ್ಕೂ ಫ್ಯಾಷನ್‌ಗೂ ಸಂಬಂಧ ಇದೆಯೇ? ಇದೆ ಎನ್ನುತ್ತದೆ ಫ್ಯಾಷನ್ ಲೋಕ. ಸ್ವಾತಂತ್ರ್ಯೋತ್ಸವಕ್ಕಾಗಿಯೇ ವಿಶೇಷವಾಗಿ ರೂಪಿಸಿದ ತ್ರಿವರ್ಣದ ಸೀರೆ, ಸಲ್ವಾರ್, ಫ್ರಾಕ್ ಜೊತೆಗೆ ಬ್ಯಾಂಡ್, ಕಿವಿಯೋಲೆ, ನೆಕ್ಲೇಸ್‌ಗಳಂತಹ ಒಡವೆಗಳೂ ಬಂದಿದ್ದು, ಫ್ಯಾಷನ್‌ಪ್ರಿಯರ ಮನತಣಿಸುತ್ತಿದೆ.

■ ಯು. ಅನಂತ್



ಕೇಸರಿ, ಬಿಳಿ, ಹಸುರು... ಮೂರು ಬಣ್ಣಗಳಿಗೆ ಮೀಸಲು. ಸ್ವಾತಂತ್ರ್ಯೋತ್ಸವ ಎಂಬ ರಾಷ್ಟ್ರೀಯ ಹಬ್ಬ. ತ್ರಿವರ್ಣ ಹೆಸರಿನಲ್ಲಿ ಬಳೆ, ಉಡುಪು, ಓಲೆ, ಸರ.. ಎಲ್ಲವೂ ತಿರಂಗಮಯ. ಫ್ಯಾಷನ್ ಲೋಕದಲ್ಲಿ ಈ ಮೂರು ರಂಗಿಗೂ ಮಹತ್ವ ಬರುವುದು ಆಗಸ್ಟ್ ತಿಂಗಳಲ್ಲೇ. ಸ್ವಾತಂತ್ರ್ಯ ಶುಭದಿನವನ್ನು ಜನ ವಿವಿಧ ರೀತಿಯಲ್ಲಿ ವೈವಿಧ್ಯಮಯವಾಗಿ ಆಚರಿಸುತ್ತಾರೆ.

ಫ್ಯಾಷನ್ ಪ್ರಿಯರಿಗೆ ರಾಷ್ಟ್ರೀಯ ಹಬ್ಬ, ನಾಡಹಬ್ಬ, ಸಾಂಪ್ರದಾಯಿಕ ಹಬ್ಬ... ಹೀಗೆ ಯಾವುದಾದರೂ ಸರಿ. ಸಂದರ್ಭಕ್ಕೆ ತಕ್ಕಂತೆ, ಕಾಲಕ್ಕೆ ತಕ್ಕಂತೆ ಫ್ಯಾಷನ್ ಅನ್ನು ದಿರಿಸಿನಲ್ಲಿ ಒಡವೆಗಳಲ್ಲಿ ಪ್ರದರ್ಶಿಸಿ ಖುಷಿಪಡುತ್ತಾರೆ. ಸದ್ಯ ಸ್ವಾತಂತ್ರ್ಯೋತ್ಸವದ ಹೊಸ್ತಿಲಲ್ಲಿ ಫ್ಯಾಷನ್‌ಪ್ರಿಯರಿಗಾಗಿಯೇ ತ್ರಿವರ್ಣದ ರಿಬ್ಬನ್, ಹ್ಯಾಂಡ್‌ಬ್ಯಾಂಡ್, ಬಳೆಗಳಿಗೆ ಎಲ್ಲಿಲ್ಲದ ಬೇಡಿಕೆ ಬರುತ್ತಿದೆ. ಇವೆಲ್ಲವನ್ನೂ ಮೀರಿ ಈಚಿನ ಟ್ರೆಂಡ್ ಎಂದರೆ ತ್ರಿವರ್ಣ ಜುಮ್ಕಾ, ಸಿಲ್ಕ್ ಥ್ರೆಡ್ ಬ್ಯಾಂಗಲ್ಸ್, ನೆಕ್ಲೇಸ್ ಹಾಗೂ ಇತರ ಆ್ಯಕ್ಸೆಸರೀಸ್ ಮಿಂಚಿನ ಸಂಚಾರ ಮಾಡುತ್ತಿದೆ.

ಈಗೀಗ ಮನೆಗಳಲ್ಲಿಯೂ ಮಹಿಳೆಯರು ಹ್ಯಾಂಡ್‌ಮೇಡ್ ಜ್ಯುವೆಲ್ಲರಿ ಮಾಡುತ್ತಿದ್ದು, ಬಟ್ಟೆಯಿಂದ, ಥ್ರೆಡ್‌ನಿಂದ ತಯಾರಿಸಿದ ಕಿವಿಯೋಲೆ, ನೆಕ್ಲೇಸ್‌ಗಳು ಬಣ್ಣಬಣ್ಣದವು ಲಭ್ಯವಿದ್ದು, ಉಡುಪಿನೊಂದಿಗೆ ಮಿಕ್ಸ್ ಅಂಡ್ ಮ್ಯಾಚ್ ಮಾಡಿಕೊಳ್ಳಲು ಅತ್ಯಂತ ಸೂಕ್ತ ಎನಿಸಿವೆ. ಅದರಲ್ಲೂ ಈಗಿನ ಫ್ಯಾಷನ್ ಟ್ರೆಂಡ್ ಆಗಿ ಸಿಲ್ಕ್ ಥ್ರೆಡ್ ಜ್ಯುವೆಲ್ಲರಿ ಮುಂಚೂಣಿಯಲ್ಲಿ ನಿಲ್ಲುತ್ತಿದೆ. ಇದರಲ್ಲಿ ಬಳೆ, ನೆಕ್ಲೇಸ್ ಮುಂತಾದ ಧರಿಸಲು ಯೋಗ್ಯವೆನಿಸುವ ಆಭರಣ ಅಲ್ಲದೆ ಹ್ಯಾಂಡ್‌ಬ್ಯಾಂಡ್‌ನಂತಹ ಆ್ಯಕ್ಸೆಸರೀಸ್ ಕೂಡ